**(ದಿಃ27.04.2026 ರ ಆದೇಶದ ಅನ್ವಯ)**

**ಸಾಕ್ಷಿಗೆ ದಿನಾಂಕಃ27-04-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಮುಂದುವರೆದ ಮುಖ್ಯ ವಿಚಾರಣೆ :: ವಾದಿ ಪರ ಶ್ರೀ. ಎಂ ಕೆ ಟಿ ವಕೀಲರಿಂದ ::**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರವನ್ನು ಈಗಾಗಲೇ ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ವಿಷಯಗಳು ಸರಿಯಾಗಿದ್ದು, ನಾನೇ ಓದಿ ತಿಳಿದು ಸಹಿ ಮಾಡಿರುತ್ತೇನೆ.

ಮುಂದುವರೆದು ಈ ಪ್ರಕರಣದಲ್ಲಿ ನಾನು ಹಾಜರುಪಡಿಸಿರುವ ದಾಖಲೆಗಳನ್ನು ಈಗ ನೋಡುತ್ತಿದ್ದೇನೆ, ಅವುಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು.

| Sl.No. | Documents | Exhibits |
|---|---|---|
| 1 | 1 ಎಸ್ ಪಿ ಎ | Ex.P-8 |

ಆದುದರಿಂದ ದಾವೆಯಲ್ಲಿ ಕೋರಿಕೊಂಡಂತೆ ದಾವೆಯನ್ನು ಡಿಕ್ರಿ ಮಾಡಿಕೊಡಬೇಕೆಂದು ಕೋರಿಕೊಳ್ಳುತ್ತೇನೆ.

**:: ಪಾಟೀ ಸವಾಲು :: ಪ್ರತಿವಾದಿಗಳ ಪರ ಶ್ರೀಮತಿ ಎಸ್ ಎಂ ವಕೀಲರಿಂದ ::**

ನಮ್ಮ ಕುಟುಂಬದ ಪಿತ್ರಾರ್ಜಿತ ಆಸ್ತಿಗಳನ್ನು ವಿಭಾಗ ಕೋರಿ ನನ್ನ ತಂದೆ ಈ ದಾವೆಯನ್ನು ಸಲ್ಲಿಸಿರುತ್ತಾರೆ. ನನ್ನ ಅಜ್ಜ ಪುಟ್ಟಪ್ಪ ರವರಿಗೆ ಎಷ್ಟು ಜನ ಸಹೋದರರು ಇರುತ್ತಾರೆ ಎಂದು ನನಗೆ ಸರಿಯಾಗಿ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು 3-4 ಜನ ಸಹೋದರರು ಇರಬಹುದು ಎಂದು ನುಡಿಯುತ್ತಾರೆ. ನನ್ನ ತಂದೆಗೆ 5 ಜನ ಸಹೋದರರು ಇರುತ್ತಾರೆ. ನನ್ನ ತಂದೆಯ ಸಹೋದರರಲ್ಲಿ ಕೇವಲ ಸಿದ್ದರಾಮಪ್ಪ ಎನುನವವರು ಊರಿನಲ್ಲಿ ವಾಸ ಮಾಡಿಕೊಂಡಿದ್ದು, ಇತರೇ ಸಹೋದರರು ಬೇರೆ ಕಡೆ ವಾಸ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಂದೆ ಬೇರೆ ಬೇರೆ ಊರುಗಳಲ್ಲಿ ವ್ಯಾಪಾರ ಮಾಡಿಕೊಂಡಿದ್ದರು. ನನ್ನ ಅಜ್ಜಿ ಪುಟ್ಟಮ್ಮ ರವರು ಊರಿನಲ್ಲಿ ಸಿದ್ದರಾಮಪ್ಪ ರವರ ಜೊತೆ ವಾಸ ಮಾಡಿಕೊಂಡಿದ್ದರು ಎಂದರೆ ಸಾಕ್ಷಿಯು ನನ್ನ ಅಜ್ಜಿ ಬೇರೆ ಮನೆ ಮಾಡಿಕೊಂಡು ವಾಸವಾಗಿದ್ದರು ಎಂದು ನುಡಿಯುತ್ತಾರೆ. ನನ್ನ ದೊಡಪ್ಪ ಕಿಟ್ಟಪ್ಪ ಯಾನೆ ಕೃಷ್ಣಪ್ಪ ರವರು

ಕಾಟೀಗನೆರೆ ಗ್ರಾಮದಲ್ಲಿ ವಾಸಮಾಡಿಕೊಂಡಿದ್ದರು ಎಂದರೆ ಸರಿ. ನನ್ನ ಅಜ್ಜಿ ವಯಸ್ಸಾದ ಸಮಯದಲ್ಲಿ ನಮ್ಮ ಕುಟುಂಬದ ಆಸ್ತಿಗಳಿಗೆ ಸಂಬಂಧಪಟ್ಟಂತೆ ಗ್ರಾಮದ ಹಿರಿಯರ ಸಮ್ಮುಖದಲ್ಲ ಒಂದು ಪಾಲುಪಾರಿಕ್ಕತ್ತು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಸಹಿ ಮಾಡುತ್ತಾರೆ ಮತ್ತು ನನ್ನ ತಂದೆ ನೋಡಿದರೆ ನಾನು ಗುರುತಿಸುತ್ತೇನೆ.

ನನ್ನ ತಾಯಿ ಮೃತರಾಗಿರುತ್ತಾರೆ. ನನ್ನ ಅಣ್ಣ ವಿಶ್ವನಾಥ ಎನ್ನುವವರು ಸಹ ಮೃತರಾಗಿರುತ್ತಾರೆ. ನನ್ನ ತಾಯಿ ಹಾಗೂ ನನ್ನ ಅಣ್ಣನ ಶವ ಸಂಸ್ಕಾರವನ್ನು ನಮ್ಮ ಊರಿನ ಜಮೀನುಗಳಲ್ಲಿ ಮಾಡಿರುತ್ತೇವೆ ಎಂದರೆ ಸರಿ. ನನ್ನ ತಂದೆ ಬೇರೆ ಕಡೆ ವಾಸ ಮಾಡಿಕೊಂಡಿದ್ದ ಕಾರಣ ನನ್ನ ಅಜ್ಜ ಅಜ್ಜಿಯ ಕೊನೆಯ ಸಮಯದಲ್ಲಿ ಅವರ ಆರೈಕೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಮ್ಮ ಕುಟುಂಬದ ಯಾವುದೇ ವ್ಯವಹಾರಗಳನ್ನು ಅವರು ನೋಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ 3 ಆಸ್ತಿಯನ್ನು ನನ್ನ ಅಜ್ಜಿ ಪುಟ್ಟಮ್ಮ ರವರು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದನ್ನು ನನ್ನ ಅಜ್ಜ ಪುಟ್ಟಪ್ಪ ರವರು ನನ್ನ ಅಜ್ಜಿ ಹೆಸರಿಗೆ ಖರೀದಿ ಮಾಡಿರುತ್ತಾರೆ. ದಾವಾ ಐಟಂ 4 ರಿಂದ 8 ಆಸ್ತಿಗಳನ್ನು ನನ್ನ ತಂದೆ ಹಾಗೂ ಅವರ ಸಹೋದರರು ಹಿಂದೆ ವಿಭಾಗ ಮಾಡಿಕೊಂಡು ಅದರ ಪ್ರತ್ಯೇಕ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ದಾವಾ ಐಟಂ 4 ಮತ್ತು 5 ರಲ್ಲಿ ಮನೆ ನಿರ್ಮಾಣ ಮಾಡಿಕೊಂಡು ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿಯು ದಾವಾ ಐಟಂ 4 ರಿಂದ 8 ರಲ್ಲಿ ಯಾವುದೇ ಹಿಸ್ಸೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ 1 ರಿಂದ 3 ಆಸ್ತಿಗಳಲ್ಲಿ ಪ್ರತಿವಾದಿಗಳು ಸೇರಿ ಕೊಳವೆ ಬಾವಿ ತೆರೆಸಿ ಅಭಿವೃದ್ಧಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಐಟಂ 1 ನ್ನು ಎಲ್ಲಾ ಕುಟುಂಬದ ಸದಸ್ಯರು ಹಿಂದೆಯೇ ತಲಾ 26 ಗುಂಟೆಯಂತೆ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಐಟಂ 1 ರ ಪೂರ್ವಕ್ಕೆ ವಾದಿಗೂ ಸಹ ಹಿಸ್ಸೆ ನೀಡಲಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ವಿಭಾಗದ ಅನ್ವಯ ಖಾತೆ ಬದಲಾವಣೆಗೆ 2015 ರಲ್ಲಿ ಕುಟುಂಬದ ಸದಸ್ಯರು ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸರ್ವೇ ದಾಖಲೆ ಸರಿ ಇಲ್ಲದ ಕಾರಣ ಖಾತೆ ಬದಲಾವಣೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು ಕುಟುಂಬದ ಸದಸ್ಯರು ಹಿಸ್ಸೆ ಪಡೆದುಕೊಂಡಿರುವ ಕಾರಣ ಈ ದಾವೆ ನಿಲ್ಲತಕ್ಕದ್ದಲ್ಲ ಎಂದರೆ ಸರಿಯಲ್ಲ. ವಾದಿಗೆ ಸಹ ಸದರಿ ವಿಭಾಗದಲ್ಲಿ ಹಿಸ್ಸೆ ಬಂದಿದ್ದರೂ

ಸಹ ಸುಳ್ಳು ಕತೆ ಕಟ್ಟಿ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಜೆ. ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: